VIII ಮಂಜೊಂಜರಿ ಸೇತುವೆಯ ನಿರ್ಮಾಣ ತಡವಾಗುತ್ತಿರುವ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಕೃಷ್ಣ ನದಿಯ ಮೇಲೆ ನಿರ್ಮಾಣ ಗೊಳ್ಳಬೇಕಾಗಿರುವ ಮಾಂಜರಿ ಸೇತುವೆಯ ಕೆಲಸ ಪ್ರಾರಂಭಿಸಲು ತಡ ಆಗುತ್ತಿರುವುದು ಸಾರ್ವಜನಿಕ ರಲ್ಲಿ ಕುತೂಹಲಕರವಾದ ವಿಷಯವಾಗಿದೆ. ಇದನ್ನು ಪ್ರಾರಂಭಿಸುವಂತೆ ಹಲವಾರು ಒತ್ತಾಯಿಸಿದರೂ ಈ ಕೆಲಸ ಯಾವ ಕಾರಣಕ್ಕಾಗಿ ವಿಳಂಬವಾಗುತ್ತಿದೆ ಎಂಬುದನ್ನು ಪರಿಗಣಿಸಿ ಮಾಂಜರಿ ಸೇತುವೆಯ ಕಾರ್ಯವನ್ನು ತೀವ್ರವಾಗಿ ಪ್ರಾರಂಭಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡುತ್ತಿದ್ದೇನೆ. ಹಾಗೂ ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆದ ಬಗ್ಗೆ ಅಂಕಿ ಅಂಶಗಳನ್ನು ಸಹ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು).—ಸ್ವಾಮಿ, ೧೭೬ ಲಕ್ಷ ವೆಚ್ಚದಲ್ಲಿ ನಿರ್ಮಾಣವಾಬೇಕಾಗಿದ್ದ ಸೇತುವೆ ಇದು, ಈ ಸೇತುವೆಗೆ ೧೦೦ ಪರ್ಸೆಂಟ್ ಲೋನ್ ಕೊಡತಕ್ಕಂಥಾದ್ದು ಕೇಂದ್ರ ಸರ್ಕಾರ. ಇದು ನ್ಯಾಷನಲ್ ಹೈವೇ ಮೇಲೆ ಬರುತ್ತದೆ, ಕೇಂದ್ರ ಸರ್ಕಾರವೇ ಇದಕ್ಕೆ ಪೂರ್ತ ಹಣ ಒದಗಿಸತಕ್ಕಂಥಾದ್ದು. ಇದರ ಬಗ್ಗೆ ಟೆಂಡರನ್ನು ಕರೆಯಲಾಗಿದೆ, ಟೆಂಡರನ್ನು ಒಪ್ಪಿಕೊಳ್ಳುವುದರ ಬಗ್ಗೆ ಶಿಕ್ಷಣ ನಡೆದಿದೆ, ಕೇಂದ್ರ ಸರ್ಕಾರದ ಅಧಿಕಾರಿಗಳು ಯಾರು ಹಣ ಕೊಡುತ್ತಾರೋ ಅವರ ಅಭಿಪ್ರಾಯಕ್ಕೂ ಕಳಿಸಿಕೊಟ್ಟಿದ್ದೇವೆ. ಅವರು ಪುನಃ ರಾಜ್ಯ ಸರ್ಕಾರಕ್ಕೆ ನೀವೇ ತೀರ್ಮಾನ ಮಾಡಿ ಎಂದು ಅವರ ಹೊಣೆಗಾರಿಕೆಯನ್ನು ನಮ್ಮ ಮೇಲೆ ಹಾಕಿದ್ದಾರೆ, ನಾಲ್ಕೈದು ದಿವಸಗಳ ಒಂದೆ ಫೈಲ್ ಬಂದಿದೆ. ಅಧಿಕಾರಿಗಳನ್ನು ತೀರ್ಮಾನ ಮಾಡುತ್ತೇನೆ. ಸಾಮಾನ್ಯವಾಗಿ ನನ್ನ ಹತ್ತಿರ ಯಾವುದೇ ಪೇಪರ್ ಆದರೂ ಸಹ ಉಳಿಯುವುದಿಲ್ಲ. ಇದನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿಲ್ಲ, ನಾನು ಬರುವುದಕ್ಕೆ ಮುಂಚೆ ಇದು ನಡೆದಿರುವುದು. ಕೇಂದ್ರ ಸರ್ಕಾರದ ದವರು ನೀವೇ ತೀರ್ಮಾನ ಮಾಡಿ ಎಂದು ಹೇಳಿದ್ದಾರೆ. ಇದರಲ್ಲಿ ಇಬ್ಬರು ಕಂಟ್ರಾಕ್ಟರುಗಳ ಬಗ್ಗೆ ಶಿಕ್ಷಣವಿದೆ, ಒಬ್ಬ ಕಂಟ್ರಾಕ್ಟರಿಗೂ ಇನ್ನೊಬ್ಬ ಕಂಟ್ರಾಕ್ಟರಿಗೂ ಪೈಪೋಟಿ ನಡೆದಿದೆ. ಈ ಫೈಟನ್ನು ಹಿಂದೆ ಮುಂದೆ ಒಡಾಡಿಸದೆ ಆಕ್ಷಿ ಜರೂರು ನಿರ್ಣಯ ತೆಗೆದುಕೊಳ್ಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಒಂದು ತಪ್ಪು ರಿಕಾರ್ಡ್ ಆಗಿದೆ. ಇದು ನ್ಯಾಷನಲ್ ಹೈವೇ ಮೇಲೆ ಇಲ್ಲ, ಮಾನ್ಯ ಮಂತ್ರಿಗಳು ಇದೆ ಎಂದು ಹೇಳಿದ್ದಾರೆ. ನ್ಯಾಷನಲ್ ಹೈವೇ ಮೇಲೆ ಬರಬೇ ಬೇರೆ ರಸ್ತೆ ಮೇಲೆ ಬರುತ್ತದೆ. ಅದಕ್ಕೆ ತಿದ್ದುಪಡಿಯಾದರೆ ಒಳ್ಳೆಯದು.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕೆ ಕೇಂದ್ರ ಸರ್ಕಾರದವರು ಸಿ. ಆರ್. ಎಫ್. ನಲ್ಲಿ ೧೦೦ ಪರ್ಸೆಂಟ್ ಹಣ ಕೊಡುವುದು.

IX ಆಂಧ್ರ ಸ್ಟೀಲ್ ಕಾರ್ಪೊರೇಷನಿನ ಅಧಿಕಾರಿಯನ್ನು ಥಳಿಸಿರುವುದು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನನಗೆ ಬಂದಿರುವ ತಾರಿನಲ್ಲಿ ಕಾಣಿಸಿದಂತೆ ಆಂಧ್ರ ಸ್ಟೀಲ್ ಕಾರ್ಪೊರೇಷನ್ ಲಿಮಿಟೆಡ್ ಇವರ ಫ್ಯಾಕ್ಟರಿಯ ಆಡಳಿತಾಧಿಕಾರಿಯನ್ನು ದಿನಾಂಕ ೨೯-೩-೮೫ ಹಾಗೂ ೩೦-೩-೮೫ ರಂದು ಗೂಂಡಾಗಿರಿಯಿಂದ ಬೆದರಿಸಿ ಬಡಿದು ಹಾಗೂ ಮ್ಯಾನೇಜರ್ ಗುಪ್ತಾರಿಗೆ ಸಹ ಧನುಕಿ ಹಾಕಿ ಪರಿಸ್ಥಿತಿಯನ್ನು ಗಂಭೀರ ವಾತಾವರಣಕ್ಕೆ ಈಡು ಮಾಡಿದ್ದರ ಕುರಿತು ಕಾನೂನು ಪಾಲನೆಯ ವಿಷಯದಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ. ಸರ್ಕಾರದಪರಂ ಯೋಗ್ಯವಾದ ಸಹಾಯವನ್ನು ಕೊಡದೇ ಇದ್ದುದರಿಂದ ಆ ಇಂಡಸ್ಟ್ರೀ ಬಂದ್ ಆಗಿದೆ. ಈ ವಿಷಯ ದಲ್ಲಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಕಂದಾಯ ಮತ್ತು ಯೋಜನೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ನಾನು ವಿವರಗಳನ್ನು ತರಿಸಿ ಉತ್ತರ ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಾವು ಹೇಳಿದಕ್ಕೆ ನಾವು ಶಿರಸಾವಹಿಸಿ ಒಪ್ಪಿದ್ದೇನೆ. ನೋಟೀಸ್ ಕೊಟ್ಟು ೮ ದಿನ ಆದರೂ ಉತ್ತರ ಇಲ್ಲ, ನಾನು ೪ಳನೇ ತಾರೀಖಿಗೆ

ಕೊಟ್ಟಿದ್ದೇನೆ, ಆದರೂ ಉತ್ತರ ಇಲ್ಲ. ಆದ್ದರಿಂದ ವಿರೋಧ ಪಕ್ಷಕ್ಕೆ ಇರುವ ಹಕ್ಕಿನಂತೆ ಜೀರೋ ಅವರನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಿದ ವಿಚಾರದಲ್ಲಿ ಒನೇ ತಾರೀಖು ವಿವರವಾದ ಉತ್ತರ ಕೊಡುತ್ತೇವೆ.

X ಹಿರಿಯೂರು ತಾಲ್ಲೂಕು ವಿ.ವಿ. ಪುರದ ಸರ್ಕಾರಿ ಪ್ರೌಢಶಾಲೆಯನ್ನು ವಾಣಿ ವಿಲಾಸ ಕೋ ಆಪರೇಟೀವ್ ಸಕ್ಕರೆ ಕಾರ್ಖಾನೆ ಆವರಣಕ್ಕೆ ಸ್ಥಳಾಂತರಿಸಿರುವುದು.

ಶ್ರೀ ಆರ್, ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೆ, ೧೯೬೧ನೇ ಇಸವಿಯಲ್ಲಿ ವಾಣಿ ವಿಲಾಸ ಡ್ಯಾಮ್ ಪಕ್ಕದ ವಿ. ವಿ. ಪುರಕ್ಕೆ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರಾಗಿತ್ತು. ಇದಕ್ಕೆ ಕಾರಣ ಅಂದರೆ ಅಲ್ಲಿಯ ಸುತ್ತಮುತ್ತಲಿನ ಆರ್ಥಿಕ ಹಿಂದುಳಿದಿರುವಿಕೆ, ಶೈಕ್ಷಣಿಕ ಹಿಂದುಳಿದಿರುವಿಕೆ ಅನುಸೂಚಿತ ಜಾತಿಯವರ ಹಿಂದುಳಿದಿರುವಿಕೆ, ಇವೆಲ್ಲಾ ಆಧಾರದ ಮೇಲೆ ಅಲ್ಲಿಗೆ ಒಂದು ಹೈಸ್ಕೂಲು ಮಂಜೂರಾಗಿತ್ತು. ಅಲ್ಲಿನ ಜನರು ಎಷ್ಟೊಂದು ವಿಶಿಷ್ಟವಾಗಿ ಅಭಿವೃದ್ಧಿ ಕಾರ್ಯ ಕೈಗೊಂಡರು ಅಂದರೆ ತಕ್ಷಣ ಸರ್ಕಾರದ ಗಮನ ಸೆಳೆದು ೫ ಎಕರೆ ಜಮೀನನ್ನು ಮಂಜೂರು ಮಾಡಿಸಿಕೊಂಡು, ಕಟ್ಟಡದ ಕೆಲಸ, ಕುಡಿಯುವ ನೀರಿನ ಕೆಲಸ ಎಲ್ಲಾ ಸೌಕರ್ಯಗಳನ್ನು ಮಾಡಿಕೊರಡಿದ್ದಂತಹ ಸಂದರ್ಭದಲ್ಲಿ ಮೊನ್ನೆ ಡಿಸೆಂಬರ್ ತಿಂಗಳಲ್ಲಿ ಪಾರ್ಲಿಮೆಂಟ್ ಚುನಾವಣೆ ನಡೆದಂಥ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಆ ಒಂದು ಹೈಸ್ಕೂಲು ಶಾಲೆಯಲ್ಲಿ ವಿ. ಪಿ. ಪುರದಿಂದ, ವಾಣಿವಿಲಾಸ್ ಕೋ–ಆಪರೇಟೀವ್ ಶುಗರ್ ಫ್ಯಾಕ್ಟರಿ ಆವರಣಕ್ಕೆ ಸ್ಥಳಾಂತರಿಸಲಿಕ್ಕೆ ಪ್ರಯತ್ನ ಆಗಿರುವುದು ಕಂಡು ಬಂದಿದೆ. ಈ ವಿಚಾರ ಕಾರ್ಮಿಕ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ. ಈಗ ಅಲ್ಲಿ ಶುಗರ್ ಫ್ಯಾಕ್ಟರಿ ಲೇ ಆಫ್ ಆಗಿದೆ. ವೈಯಕ್ತಿಕವಾಗಿ ಹೇಳುವುದಾದರೆ, ಅಲ್ಲಿ ಒಂದು ಖಾಸಗಿ ಪ್ರೌಢಶಾಲೆ ನಡೆಯುತ್ತಿದೆ. ಆದರ ಹಿನ್ನೆಲೆಯನ್ನು ಇಟ್ಟುಕೊಂಡು ಸ್ಥಳಾಂತರ ಮಾಡುತ್ತಿದ್ದಾರೆಂದು ಕಾಣಿಸುತ್ತಿದೆ. ಯಾರದೋ ಚಮತ್ಕಾರಕ್ಕೋಸ್ಕರ ಅದು ಆಗುವಂಥಾದ್ದು ಆಗಬಾರದು ಈಗಾಗಲೆ ಸರತಕ್ಕ ಹೈಸ್ಕೂಲು ಅಲ್ಲಿಯೇ ಉಳಿಯಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ವಿಷಯ ಗೊತ್ತಿದೆ. ಒಂದು ಶಾಲೆ ಮೊದಲಿನಿಂದ ಅಲ್ಲಿ ಇತ್ತು, ಇನ್ನೊಂದು ಸರ್ಕಾರಿ ಶಾಲೆ ಬಂದಿದೆ. ಆದು ಏನೇ ಇರಲಿ, ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಎರಡು ಶಾಲೆಗಳ ಅಗತ್ಯ ಇದೆಯೇ ಎಂಬುದರ ಬಗ್ಗೆ ನಾನು ನೋಡಿ ಇ ಶಾಲೆ ಅಲ್ಲಿಯೇ ಉಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ತರಿಸತಕ್ಕ ವರದಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತೇನೆ. ನಿಷ್ಪಕ್ಷಪಾತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ವಿಚಾರ ಸುಮಾರು ಎಂಟತ್ತು ಸಾರಿ ನನ್ನ ಹತ್ತಿರಕ್ಕೂ ಬಂದಿರಬೇಕು. ಈಗ ವಾಣಿವಿಲಾಸ್ ಇದರಲ್ಲಿ ಪ್ರೈವೇಟ್ ಹೈಸ್ಕೂಲು ಒಂದು ಇದೆ, ಗವರ್ನ್‌ಮೆಂಟ್ ಹೈಸ್ಕೂಲು ಒಂದು ಇದೆ, ಗವರ್ನ್‌ಮೆಂಟ್ ಹೈಸ್ಕೂಲು ಒಂದು ಇದೆ. ಮಾನ್ಯ ಮಂತ್ರಿಗಳು ಅಲ್ಲಿ ಎರಡು ಹೈಸ್ಕೂಲು ಇರಲಿಕ್ಕೆ ಸಾಧ್ಯವೇ ಪರಿಶೀಲನೆ ಮಾಡುತ್ತೇವೆಂದು ಹೇಳಿದರು ಅದನ್ನು ನಾನು ಒಪ್ಪುತ್ತೇನೆ, ಈಗ ಅಲ್ಲಿ ರಾಜಕೀಯ ದೃಷ್ಟಿಯಿಂದ ಪ್ರಾರಂಭವಾಗುತ್ತಿದೆ ಎನ್ನುವುದು ಕಂಡುಬರುತ್ತಿದೆ. ಏನಾದರೂ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಈಗ ಅಲ್ಲಿ ಎರಡು ಹೈಸ್ಕೂಲಗಳು ನಡೆಯಲಿಕ್ಕೆ ಅವಕಾಶ ಇದೆ ಎಂದು ಕೇಳಿದ್ದೇನೆ. ಈಗ ಏನಾದರೂ ಶಿಫ್ಟ್ ಮಾಡಿದರೆ ನಮ್ಮ ತಲೆಯ ಮೇಲೆ ನಾವೇ ಆಪಾದನೆ ಒಪ್ಪಿಕೊಂಡ ಹಾಗೆ ಆಗುತ್ತದೆ. ರಾಜಕೀಯದ ಒತ್ತಡದಿಂದ ಆಗಿರತಕ್ಕ ಆರ್ಡರ್ ಎಂದು ತಿಳಿದು ಬಂದಿದೆ. ಈಗ ಅಲ್ಲಿ ಎರಡು ಹೈಸ್ಕೂಲುಗಳನ್ನು ಮುಂದುವರಿಸಿ, ಮಕ್ಕಳಿಗೆ ತೊಂದರೆಯಾಗುವುದು ಬೇಡ.